1

# ಎಲ್ಕಾನ

## ಶ್ರದ್ಧಾಭಕ್ತಿಯುಳ್ಳ ತಂದೆ

## (1:1-2:21)

ಒಬ್ಬ "ತಂದೆಯ" ಪಾತ್ರ ಬಹು ಜವಾಬ್ದಾರಿಯಿಂದ ಕೂಡಿದ್ದಾಗಿದೆ. ಸಾಮಾಜಿಕ ಅಧ್ಯಯನದ ಪ್ರಕಾರ, ಕುಟುಂಬದ ಮೇಲೆ ತಂದೆಯ ಪಾತ್ರ ಪ್ರಮುಖವಾದ ಪ್ರಭಾವವನ್ನು ಬೀರುತ್ತದೆ. ಒಂದು ಮಗುವಿನ ಭಾವನಾತ್ಮಕ, ಸಾಮಾಜಿಕ ಮತ್ತು ಅಧ್ಯಾತ್ಮಿಕ ಒಳಿತು, ಕುಟುಂಬದಲ್ಲಿ ತಂದೆಯ ಪಾತ್ರದ ಮೇಲೆ ಆಧಾರಗೊಂಡಿದೆ. ಗೌರವದಿಂದಲೂ ಮತ್ತು ವಿಶ್ವಾಸದಿಂದಲೂ ಮಗುವಿನ ಕಣ್ಣುಗಳು ತಂದೆಯನ್ನು ದೃಷ್ಟಿಸುತ್ತದೆ. "ನನ್ನ ತಂದೆಯು ಏನನ್ನೂ ಮಾಡಲು ಸಾಧ್ಯ!" ಎಂದು ಮಗುವು ಹೊಗಳಿಕೊಳ್ಳುತ್ತದೆ. ತಂದೆಯ ಪ್ರಾಮುಖ್ಯತೆಯ ಕುರಿತು ಸಂಪೂರ್ಣ ವ್ಯಾಖ್ಯೆಯನ್ನು ಅಂತಹ ಬಾಲಿಷ ನೋಟವು ವ್ಯಕ್ತಪಡಿಸುತ್ತದೆ. ಈ ಕೆಳಗಿನ ಪದ್ಯವು ಇನ್ನೂ ಹೆಚ್ಚಿನ ಒತ್ತು ಕೊಡುತ್ತದೆ:

> ಒಬ್ಬ ವ್ಯಕ್ತಿಯನ್ನು ತಂದೆಯಾಗಿ ಖರೀದಿಸಲು ನಾನು ಹೋಗುವದಾದರೆ ಇಂಥದ್ದನ್ನು ಖರೀದಿಸುತ್ತಿದ್ದೆ:
> ಒಬ್ಬ ಚಿಕ್ಕ ಬಾಲಕನ "ಯಾಕೆ?" ಗಳನ್ನು ಉತ್ತರಿಸಲು ಯಾವಾಗಲೂ ನಿಂತುಕೊಳ್ಳುವ ವ್ಯಕ್ತಿಯನ್ನು,
> ಒಬ್ಬ ಬಾಲಕ ಅಥವಾ ಬಾಲಕಿಯನ್ನು ಕರುಣೆಯಿಂದ ಮಾತಾನಾಡಿಸುವ ವ್ಯಕ್ತಿಯನ್ನು,
> ಸ್ವಲ್ಪ ಸೂರ್ಯಕಾಂತಿಯ ಬೆಳಕು ಮತ್ತು ಆನಂದವನ್ನು ಬೀರುವ ಒಬ್ಬ ವ್ಯಕ್ತಿಯನ್ನು.
> ಬೈಬಲಿನ ಚಿನ್ನದ ನಿಯಮಗಳನ್ನು ಅನುಸರಿಸುವ ಒಬ್ಬ ತಂದೆಯನ್ನು ಆಯ್ದುಕೊಳ್ಳುತ್ತಿದ್ದೆ,
> ಮತ್ತು ಸಭೆಗೂ ಬೈಬಲಿನ ಶಾಲೆಗೂ ತಪ್ಪದೇ ಹೋಗುವವನನ್ನು.
> ನಮ್ಮ ಕುಟುಂಬದ ವೃಕ್ಷದಲ್ಲಿ ಇಡುವದಕ್ಕಾಗಿ ಒಬ್ಬ ಉತ್ತಮ ತಂದೆಯನ್ನು ಕೊಂಡುಕೊಳ್ಳುತ್ತಿದ್ದೆನು -
> ಮತ್ತು ನಂತರ ನನ್ನನ್ನು ನೋಡಿ ಅವರು ಹೆಮ್ಮೆ ಪಡುವಂತೆ ನಾನು ಅವರಂತೆ ಜೀವಿಸುವದಕ್ಕೆ ಪ್ರಯತ್ನಿಸುತ್ತಿದ್ದೆನು!

ಒಬ್ಬ ವ್ಯಕ್ತಿಯನ್ನು ಪಿತನನ್ನಾಗಿ ನೇಮಿಸಿ, ತದ ನಂತರ "ತಂದೆಯ" ಜವಾಬ್ದಾರಿಗಳನ್ನು ಅವನಿಗೆ ಕೊಟ್ಟ ಮೇಲೆ, ಅವನು "ಶ್ರದ್ಧಾಭಕ್ತಿಯನ್ನು" ಹೊಂದಿರಬೇಕೆಂದು ದೇವರು ಅಪೇಕ್ಷಿಸಿದನು. ಒಬ್ಬರು ಹೀಗೆ ನುಡಿದಿದ್ದಾರೆ - "ನಿಜವಾದ ಶ್ರದ್ಧೆಯು ಆತ್ಮದಲ್ಲಿ ಕ್ರಮವನ್ನು ವ್ಯಕ್ತಪಡಿಸುತ್ತದೆ - ಸುಭದ್ರ ಮತ್ತು ಸುಂದರವಾದ ಮಧ್ಯರೇಖೆ ಯನ್ನು ಆಧಾರಮಾಡಿಕೊಂಡು, ಮಧುರವಾದ ಸಂಬಂಧದಲ್ಲಿ ಸಂಗೀತದೊಂದಿಗೆ ಸುತ್ತುವ ಅನುಭವ. ಅದು ದೇವರ ಸಿಂಹಾಸನದ ಸುತ್ತ ನಿಧಾನವಾಗಿ ತಿರುಗುವ ಒಂದು ಮಹಾನಿಯಮದಂತಿದೆ." ಒಬ್ಬ ಶ್ರದ್ಧಾಭಕ್ತಿಯುಳ್ಳ ತಂದೆಯು ದೇವ ಭಕ್ತಿಯ ಮನುಷ್ಯನಾಗಿದ್ದಾನೆ. ಅವನು ತನ್ನ ಎಲ್ಲಾ ಕಾರ್ಯಗಳಲ್ಲಿ ದೇವರನ್ನು ಮುಂದಿರಿಸುತ್ತಾನೆ! ಈ ಗುಣವೇ ಪಿತೃತ್ವಕ್ಕೆ ಮುಖ್ಯವಾಗಿ

ಬೇಕಾಗಿದೆ!

ಎಲ್ಕಾನನು ಈ ಶ್ರದ್ಧಾಭಕ್ತಿಯನ್ನು ಸುಂದರವಾಗಿ ಪ್ರತಿಬಿಂಬಿಸುತ್ತಾನೆ. ಅವನನ್ನು ವರ್ಣಿಸುವದಕ್ಕೆ "ಶ್ರದ್ಧಾಭಕ್ತಿ" ಉತ್ತಮವಾದ ಪದವಾಗಿದೆ. ಅವನ ಬಲವಾದ ನಂಬಿಕೆಯು ಅವನ ಎಲ್ಲಾ ಕಾರ್ಯಗಳನ್ನು ಆಳುವದಕ್ಕೂ ಮತ್ತು ಅಳೆಯುವದಕ್ಕೂ ಶಕ್ತವಾಗಿತ್ತು. ಯಾವ ಮಗುವಾದರೂ ಬಯಸುವ ತಂದೆ ಅವನಾಗಿದ್ದನು.

ಐತಿಹಾಸಿಕವಾಗಿ, ಎಲ್ಕಾನನ ಕುರಿತು ಈ ಕೆಳಗಿನ ವಿಷಯಗಳು ಗೊತ್ತಿವೆ. ಕಾನನ್ ದೇಶದಲ್ಲಿ ನೆಲೆಸಿದವರಲ್ಲಿ ಐದನೇ ತಲೇಮಾರಿನವರಲ್ಲಿ ಒಬ್ಬನು. ಅವನು ಲೇವಿ ವಂಶಸ್ಥನು ಮತ್ತು ರಾಮದಲ್ಲಿನ ಎಫ್ರಾತ್ ಪ್ರಾಂತ್ಯದಲ್ಲಿ ವಾಸಿಸುತ್ತಿದ್ದನು. ಧರ್ಮಶಾಸ್ತ್ರವು ಅವನ ವಿಷಯದಲ್ಲಿ ತಿಳಿಯಪಡಿಸುವದೆಲ್ಲವೂ 1:1-2:21ರಲ್ಲಿದೆ. ಅವನಿಗೆ ಇಬ್ಬರು ಪತ್ನಿಯರಿದ್ದರು. ಈ ಸಂಬಂಧವನ್ನು ಹಳೆಯ ನಿಯಮಗಳು ಅನುಮತಿಸುತ್ತಿದ್ದವು (ಧರ್ಮೋಪದೇಶಕಾಂಡ 21:15). ಆಲಯದಲ್ಲಿ ಅವನು ಸಮರ್ಪಿಸಿದ ಉದಾರವಾದ ಕಾಣಿಕೆಯು, ಅವನು ಐಶ್ವರ್ಯವಂತನೆಂದು ಸೂಚಿಸುತ್ತದೆ (1:24), ಬಹುಪತ್ನಿತ್ವಕ್ಕೆ ಮೋಶೆಯ ಧರ್ಮಶಾಸ್ತ್ರಕ್ಕನುಸಾರವಾಗಿ ಅನುಮತಿಯಿದ್ದರೂ, ಸರ್ವಸಾಮಾನ್ಯವಾಗಿ ಅದು ಸ್ವೀಕೃತವಾಗಿರಲಿಲ್ಲ. ಅದು ದೇವರಿಂದ ಬಂದ ಅಪ್ಪಣೆಯಾಗಿರಲಿಲ್ಲ. ಎಲ್ಲೆಲ್ಲಿ ಆ ಪದ್ಧತಿಯಿತ್ತೋ ಅಲ್ಲಿ ಕುಟುಂಬದ ಪ್ರೀತಿ ನಾಶವಾಗಿತ್ತು!

ದೇವರಲ್ಲಿ ಆಳವಾದ ನಂಬಿಕೆಯಿದ್ದ ಎಲ್ಕಾನನು ಒಬ್ಬ ಸಜ್ಜನನಾಗಿದ್ದನು. ಯಹೋವನೆಡೆಗೆ ಭಕ್ತಿಯು ವಿಶೇಷವಾಗಿರುವ ನ್ಯಾಯಸ್ಥಾಪಕರ ಕಾಲದಲ್ಲಿ ಅವನು ವಾಸಿಸುತ್ತಿದ್ದುದರಿಂದ ಅದು ಬಹು ಪ್ರಾಮುಖ್ಯವಾಗಿತ್ತು. ಅವನ ಜೀವಿತದಲ್ಲಿ ಶ್ರದ್ಧಾಭಕ್ತಿಯು ಎಷ್ಟು ಪ್ರಭಾವಶಾಲಿಯಾಗಿತ್ತು ಎಂದು ಶ್ರದ್ಧಾಭಕ್ತಿಯುಳ್ಳ ಈ ತಂದೆಯ ಕುರಿತ ಈ ಕೆಲವು ಪ್ರಕಟಣೆಗಳಿಂದ ತಿಳಿದು ಬರುತ್ತದೆ.

## ಅವನ ಶ್ರದ್ಧಾಭಕ್ತಿಗೆ ಕಾರಣವಾದ ಕೆಲವು ಅಂಶಗಳು

*ಮೊದಲಿಗೆ, ಎಲ್ಕಾನನ ದಿನನಿತ್ಯದ ಜೀವಿತವು ಅವನ ಮಕ್ಕಳ ಎದುರು ಧರ್ಮಶ್ರದ್ಧೆಯನ್ನು ಪ್ರದರ್ಶಿಸುತ್ತಿತ್ತು (1:3).* ಅನ್ಯ ದೇವತೆಗಳ ಬದಲಾಗಿ ಯಹೋವ ನನ್ನು ಈ ವ್ಯಕ್ತಿ ಆರಾಧಿಸುತ್ತಿದ್ದನು (7:4). ಒಬ್ಬನೇ ದೇವರು ಎಂದು ಅರಿತು ಕೊಂಡ ಎಲ್ಕಾನನು, ಯಹೋವನನ್ನೆ ಆರಾಧಿಸಲು ನಿರ್ಧರಿಸಿದನು. ದೇವರಲ್ಲಿನ ಅವನ ನಂಬಿಕೆಯ ಕಾರಣ, ಅವನ ಮಕ್ಕಳೂ ಅವನ ಮಟ್ಟಕ್ಕೆ ನಿಲ್ಲುವಂತೆ ಎಲ್ಕಾನನ ಜೀವಿತವು ಅವರಿಗೆ ಸವಾಲಾಗಿತ್ತು (ಯೋಬ 1:15). ತನ್ನ ಮನೆಯಲ್ಲಿ ಆತ್ಮಿಕ ವಿಷಯಗಳ ಕುರಿತು ಮಾತಾನಾಡುವ ತಂದೆಯಾಗಿದ್ದನು (1:23; ಧರ್ಮೋಪದೇಶಕಾಂಡ 6:6-9). ಇಂಥಹ ತಂದೆಯು ತನ್ನ ಕುಟುಂಬದಲ್ಲಿ ಎಂಥಾ ಪ್ರಭಾವವನ್ನು ಬೀರಬಲ್ಲನೆಂದು ಊಹಿಸಬಲ್ಲಿರೋ? ಎಲ್ಕಾನನಂಥಾ ಶ್ರದ್ಧಾಭಕ್ತಿಯುಳ್ಳ ತಂದೆಯ ಆಶೀರ್ವಾದವಿರುವ ಕುಟುಂಬವು ಆನಂದದಿಂದ ತುಂಬಿರುತ್ತದೆ! (ಆದಿಕಾಂಡ 18:19).

ಮಿಸಿಸಿಪಿ ನದಿಯ ದಂಡೆಯ ಮೇಲೆ ಒಬ್ಬ ತಂದೆ ವಾಸಿಸುತ್ತಿದ್ದನು. ಲೋಕವು ಅವನನ್ನು ಶ್ರೀಮಂತನೆಂದು ಕರೆಯುತಿತ್ತು. ಒಂದು ಅಪಘಾತದ ಕಾರಣದಿಂದಾಗಿ ಅವನ ಹಿರಿಮಗನನ್ನು ಪ್ರಜ್ಞೆಯಿಲ್ಲದ ಸ್ಥಿತಿಯಲ್ಲಿ ಮನೆಗೆ ತಂದರು. ವೈದ್ಯರನ್ನು ಬೇಗನೆ ಕರೆಯಲಾಯಿತು. ಮಗನು ಗುಣಮುಖನಾಗುವನೋ ಎಂದು ತಂದೆ ವಿಚಾರಿಸಿದರು: "ಇಲ್ಲ ಅವನು ಸಾಯುತ್ತಿದ್ದಾನೆ. ಗುಣ ಹೊಂದುವದಿಲ್ಲ" ಎಂಬ ಉತ್ತರ ದೊರಕಿತು. "ಅವನು ಸಾಯುತ್ತಿದ್ದನೆಂದು ಗೊತ್ತಾಗದೇ ಅವನು ಸಾಯಬಾರದು. ನಾವು ಅದನ್ನು ಅವನಿಗೆ ತಿಳಿಸುವಂತೆ ಸ್ವಲ್ಪ ಸಮಯವಾದರೂ ಅವನನ್ನು ಎಚ್ಚರಗೊಳಿಸಲಾರಿರೋ?" ಎಂದು ಅವನ ತಂದೆ ಕೇಳಿಕೊಂಡರು. ವೈದ್ಯರು ಪ್ರಯತ್ನಿಸಿದ ನಂತರ ಆ ಹುಡುಗನು ಎಚ್ಚರಗೊಂಡನು.

ಆಗ ಅವನ ತಂದೆಯು "ವೈದ್ಯರು ಹೇಳುವ ಪ್ರಕಾರ ನೀನು ಬದುಕುವದಿಲ್ಲ. ಇದನ್ನು ನಿನಗೆ ನಾನು ತಿಳಿಸದೇ ಸಾಯಗೊಡುವದಿಲ್ಲ" ಎಂದು ಅಳುತ್ತಾ ಹೇಳಿದರು. ಆಗ ಆ ಮಗನು - "ನನಗೋಸ್ಕರ ಪ್ರಾರ್ಥಿಸಲಾರೆಯಾ?" ಎಂದು ಪ್ರಶ್ನಿಸಿದನು. ತಂದೆಯು ಮಾತುಬಾರದೇ, ಸ್ವಲ್ಪ ಸಮಯದ ತರುವಾಯ ನಿಧಾನ ವಾಗಿ ಒಪ್ಪಿಕೊಂಡರು, "ನನಗೆ ಪ್ರಾರ್ಥಿಸಲು ಬರುವದಿಲ್ಲ." ಆ ಹುಡುಗನು ಪುನಃ ಪ್ರಜ್ಞೆಯನ್ನು ಕಳಕೊಂಡು ಸ್ವಲ್ಪ ಸಮಯದಲ್ಲಿಯೇ ಸತ್ತು ಹೋದನು. ದುಃಖಕರವಾದ ಸಂಗತಿಯೆಂದರೆ, ಆ ತಂದೆಯು ಮಗನೊಂದಿಗೆ ಅನೇಕ ವರ್ಷಕಳೆದಿದ್ದರೂ ಒಂದು ಬಾರಿಯಾದರೂ ಅವನಿಗಾಗಿ ಪ್ರಾರ್ಥಿಸಿರಲಿಲ್ಲ!

*ಎರಡನೇಯದಾಗಿ, ದೇವರಿಗೆ ಕೊಟ್ಟ ಮಾತಿಗೆ ತಪ್ಪದೇ ನಡೆಯುವದು ಎಷ್ಟು ಅವಶ್ಯವೆಂದು ಎಲ್ಕಾನನು ತನ್ನ ಮಕ್ಕಳಿಗೆ ಬಹಳ ಎಚ್ಚರಿಕೆಯಿಂದ ಕಲಿಸಿದನು (1:21).* ನ್ಯಾಯಸ್ಥಾಪಕರ ದಿನಗಳು "ಹರಕ"ಗಳನ್ನು ಸಲ್ಲಿಸುವ ದಿನಗಳಾಗಿದ್ದವು. ಇಲ್ಲಿ ಒಂದು ಉದಾಹರಣೆ ಇದೆ. ಈ ಹರಕೆಯು ಹನ್ನಳ ವಿಜ್ಞಾಪನೆಗೆ ಸಂಬಂಧಿಸಿದ್ದಿರಬಹುದು. ಆದರೆ ಎಲ್ಕಾನನು ತಾನು ಮಾಡಿದ ಪ್ರತಿಜ್ಞೆಯನ್ನು ಹೇಗೆ ನೆರೆವೇರಿಸುತ್ತಿದ್ದನೆಂದು ಅವನ ಕುಟುಂಬಕ್ಕೆ ಅರಿವಿತ್ತು. ಅವನು ಮೊದಲು ದೇವರಿಗೆ ವಾಗ್ದಾನ ಮಾಡಿ ನಂತರ ಅದನ್ನು ನೆರವೇರಿಸುತ್ತಿದ್ದದ್ದನ್ನು ಅವರು ನೋಡಿದ್ದರಿಂದ ಅವರಿಗೆ ಬೇರೆ ಹೇಳುವದಕ್ಕೆ ಅಸ್ಪದವಿರಲಿಲ್ಲ. ತನ್ನ ಈ ಕಾರ್ಯದ ಮೂಲಕ ಎಲ್ಕಾನನು ಬಹು ದೊಡ್ಡ ಪಾಠವನ್ನು ಬೋಧಿಸಿದನು. ತಂದೆಗಳೇ, ದೇವರಿಗೆ ಕೊಟ್ಟ ಮಾತನ್ನು ನೆರವೇರಿ ಸುವ ಪ್ರಾಮುಖ್ಯತೆಯನ್ನು ನೀವು ನಿಮ್ಮ ಮಕ್ಕಳಿಗೆ ಹೇಳಿಕೊಟ್ಟಿದ್ದೀರೋ? ನಿಮ್ಮ ಉದಾಹರಣೆ ಬಹು ಬಲವಾದ ಪ್ರಸಂಗವಾಗಿದೆ. ಯಥಾರ್ಥವಾದ ಶ್ರದ್ಧಾಭಕ್ತಿಯು ನೀವು ದೇವರೊಂದಿಗೆ ಮಾಡಿಕೊಂಡ ವಾಗ್ದಾನಗಳನ್ನು ನೆರವೇರಿಸುವದರಲ್ಲಿದೆ. (ಓದಿರಿ 1 ಯೋಹಾನ 2:6; ಕೀರ್ತನೆ 1:1, 2; 116:17, 18; 2 ಅರಸು 15:1-3; ಪ್ರಸಂಗಿ 5:2-6.)

*ಮೂರನೇಯದಾಗಿ, ಎಲ್ಕಾನನು ತನ್ನ ಕುಟುಂಬದವರು ಆರಾಧನೆಯಲ್ಲಿ ಭಾಗತೆಗೆದುಕೊಳ್ಳುವದಕ್ಕೆ ಉತ್ತೇಜಿಸಿದನು (1:4, 21).* ಆರಾಧನೆಯಲ್ಲಿ ಕ್ರಮಬದ್ಧ ವಾಗಿ ರುವ ತಂದೆಯೊಬ್ಬ ಇಲ್ಲಿದ್ದಾನೆ! ತನ್ನ ಕರ್ತವ್ಯದ ಕರೆ ಮತ್ತು ಸಂಯೋಗದ ಒತ್ತಾಯದಿಂದ ಅವನು ಆರಾಧನೆಗೆ ಹೋಗುವದಕ್ಕೆ ಆಸಕ್ತಿ ತೋರಿಸಿದನು. ಅದನ್ನು ಬಿಟ್ಟು ಬಿಡಲಿಲ್ಲ (ನೆಹೆಮೀಯ 10:39; ಇಬ್ರಿಯ 10:25). ಅವನು ಬಹು ದೂರ ಪ್ರಯಾಣಿಸಬೇಕಾಗಿತ್ತು. ಆ ತೊಂದರೆ ಅವನಿಗೆ ಅಡ್ಡಿ ಮಾಡಲಿಲ್ಲ. ತನ್ನ ಕುಟುಂಬದವರೆಲ್ಲರೂ ತನ್ನೊಂದಿಗೆ ಬರುವಂತೆ ಖಚಿತಪಡಿಸಿಕೊಂಡನು. ಏನೋ ಅಡ್ಡಿ ಬರದ ಹೊರತು "ಎಲ್ಲರೂ" ಅವನೊಂದಿಗೆ ಹೊರಟರು (1:21). ಆರಾಧನೆಯು ಕುಟುಂಬದ ಸಮಯವಾಗಿತ್ತು. ಅವನು ಆರಾಧನೆಯಲ್ಲಿ ಕುಟುಂಬದ ಐಕ್ಯತೆಯನ್ನು ಉತ್ತೇಜಿಸಿದನು. ತನ್ನ ಎಲ್ಲಾ ಕುಟುಂಬದವರೊಂದಿಗೆ ಹೋಗು ವದಕ್ಕೆ ಯೋಜಿಸ ಬೇಕಿತ್ತು; ಯಜ್ಞಕ್ಕೆ ಬೇಕಾದ ವಸ್ತುಗಳನ್ನು ಜೋಡಿಸುವದಕ್ಕೆ ಸಿದ್ಧತೆ ಬೇಕಿತ್ತು. ಒಬ್ಬ ತಂದೆಯಾಗಿ ನಾಯಕತ್ವ ತೆಗೆದುಕೊಂಡು ತನ್ನ ಕುಟುಂಬದವರು ದೇವರನ್ನು ಆರಾಧಿಸುವದಕ್ಕೆ ಬೇಕಾಗುವ ಎಲ್ಲಾ ಸಿದ್ಧತೆಯನ್ನು ಮಾಡಿದನು. ಏನನ್ನು ಸಿದ್ಧಮಾಡ ಬೇಕಿತ್ತೋ ಅದೆಲ್ಲವನ್ನೂ ಸಿದ್ಧ ಮಾಡುವ ಭಾವನೆಯಿದ್ದ ತಂದೆಯಾಗಿದ್ದನು. ಅವನ ಆರಾಧನೆಯು, ಗೌರವ ಸಲ್ಲಿಸುವಿಕೆ, ತಪ್ಪೊಪ್ಪಿಕೊಳ್ಳುವಿಕೆ, ವಿಜ್ಞಾಪನೆ ಮತ್ತು ಕೃತಜ್ಞತಾಸ್ತುತಿ ಒಳಗೊಂಡಿತು. ಅವನಿಗೆ ಆರಾಧನೆಯು ಬಹು ಪ್ರಾಮುಖ್ಯವಾಗಿತ್ತು!

ಆರಾಧನೆಯಿಂದ ಅವನು ಹಿಂದೆ ಬರುವಾಗ ಅವನ ಹೃದಯದಲ್ಲಿ ಶ್ರದ್ಧಾಭಕ್ತಿಯು ಇನ್ನೂ ಆಳುತಿತ್ತು (1:19). ಭಕ್ತಿಯ ಜೀವನದಿಂದ ಎಲ್ಕಾನನು ಬೇಸರಗೊಳ್ಳಲಿಲ್ಲ. ಆದರೆ ತನಗೆ ದೊರಕುವ ಎಲ್ಲಾ ಅವಕಾಶಗಳನ್ನು ಆಸಕ್ತಿಯಿಂದ ಉಪಯೋಗಿಸಿದನು. ತನ್ನ ಕುಟುಂಬಕ್ಕೆ ಅವನ ಭಾವನೆಯ ಮೂಲಕ ತಿಳಿಸುತ್ತಿದ್ದ ಸಂದೇಶವನ್ನು ಗಮನಿಸಿದೆಯಾ? ಆರಾ ಧನೆಯಲ್ಲಿ ಪಾಲು ತೆಗೆದು ಕೊಂಡು ಹಿಂತಿರುಗಿದ ನಂತರ ಇರುವ ಅವರ ವರ್ತನೆಯನ್ನು

(ಕುಟುಂಬದವರೊಂದಿಗೆ); ತಂದೆಗಳು ಅವಲೋಕಿಸ ಬಹುದು. ಅದು ಮಕ್ಕಳ ಮೇಲೆ ಪರಿಣಾಮ ಬೀರುತ್ತದೆ (ಲೂಕ 11:28).

ಎಲ್ಕಾನನು ತನ್ನ ಮಕ್ಕಳನ್ನು ಆರಾಧನೆಗೆ ಉತ್ತೇಜಿಸಿದನೆಂಬ ಸೂಚನೆಯಿದೆ (1:4). ಯಜ್ಞಗಳನ್ನು ಅರ್ಪಿಸಿದ ತರುವಾಯ ಭಾಗಗಳನ್ನು ಆರಾಧಕರಿಗೆ ಕೊಡಲಾಗುತಿತ್ತು. ಹಬ್ಬವನ್ನು ಆಚರಿಸಿದ ನಂತರ ಉಳಿದ ಯಜ್ಞದ ಭಾಗವನ್ನು ತಿನ್ನುತ್ತಿದ್ದರು. ಇಂಥ ಸಂಧರ್ಭಗಳಲ್ಲಿ ಲೇವಿಯರನ್ನು, ಬಡವರನ್ನು ಮತ್ತು ವಿಧವೆಯರನ್ನು ಆಹ್ವಾನಿಸ ಬೇಕೆಂದು ದೇವರು ಆಜ್ಞಾಪಿಸಿದ್ದನು (ಧರ್ಮೋಪದೇಶಕಾಂಡ 16:11). ಅದರಲ್ಲಿ ಪಾಲು ತೆಗೆದುಕೊಳ್ಳುವವರೆಲ್ಲರೂ ತಮ್ಮ ಕಾರ್ಯಗಳೆಲ್ಲವೂ ಆರಾಧನೆಯೆಂದು ತಿಳಿದುಕೊಳ್ಳ ಬೇಕಿತ್ತು. ಇಂಥ ಸಂಧರ್ಭಗಳಲ್ಲಿ ಎಲ್ಕಾನನು ತನ್ನ ಮಕ್ಕಳಿಗೆ ಆರಾಧನೆಯ ಕ್ರಮದ ಕುರಿತು ತರಬೇತಿ ಕೊಡುತ್ತಿದ್ದನು (ಎಫೆಸ 6:4). ಕ್ರಮಬದ್ಧವಾದ ಆರಾಧನೆಯನ್ನು ಮಾಡುವದಕ್ಕೆ ಮಕ್ಕಳಿಗೆ ತರಬೇತಿ ಕೊಡುವದಕ್ಕೆ ತಂದೆಗಳು ಇಂದು ಸಮಯ ಮಾಡಿಕೊಳ್ಳಬೇಕು. ಕ್ರಮ ಬದ್ಧವಾದ ಆರಾಧನೆಯ ಕುರಿತು ಮಕ್ಕಳಿಗೆ ಯಾವ ತರದ ತರಬೇತಿ ಇರದ ಕಾರಣ ಅವರ ಆರಾಧನೆಯು ಹುರುಳಿಲ್ಲದ್ದು ಮತ್ತು ವ್ಯರ್ಥವಾದದ್ದು ಆಗಿದೆ!

## ಅವನ ಶ್ರದ್ಧಾಭಕ್ತಿಯ ಗುಣದಿಂದಾದ ಫಲಗಳು

ಅವನ ಕುಟುಂಬದವರೊಂದಿಗೆ ವ್ಯವಹರಿಸುವ ರೀತಿಯಿಂದ ಎಲ್ಕಾನನ ಶ್ರದ್ಧಾಭಕ್ತಿಯು ಗಮನಕ್ಕೆ ಬಂದದ್ದು ಮಾತ್ರವಲ್ಲದೆ ಅವನು ತೋರ್ಪಡಿಸಿದ ಗುಣಲಕ್ಷಣಗಳಿಂದಲೂ ತೋರಿ ಬಂದಿತು.

*ಮೊದಲಿಗೆ, ಅವನು ಅರ್ಥಮಾಡಿಕೊಳ್ಳುವ ವ್ಯಕ್ತಿಯಾಗಿದ್ದನು (1:23).* ಅವನು ಅರ್ಥ ಮಾಡಿಕೊಳ್ಳುವವನಾಗಿದ್ದುದರಿಂದ ಅವನು ಬಿಟ್ಟುಕೊಡುವದಕ್ಕೂ ಸಿದ್ಧನಾಗಿದ್ದನು. ಯಾವದಕ್ಕೂ ಒಪ್ಪಿಕೊಳ್ಳದ ಮತ್ತು ಅಲುಗಾಡದ, ಶಿಸ್ತು ಬದ್ಧ ರಾಗದ ತಂದೆಗಳು, ಎಲ್ಕಾನನು ತನ್ನ ಮನೆಯಲ್ಲಿ ಆನಂದಿಸಿದ ಸಂಪೂರ್ಣವಾದ ಪ್ರೀತಿಯನ್ನು ಅನುಭವಿಸಲಾರರು. ಒಂದು ವೇಳೆ ತಂದೆಗಳಲ್ಲಿರುವ ಶ್ರದ್ಧಾಭಕ್ತಿಯು ಎಲ್ಕಾನನಲ್ಲಿದ್ದ ಸಾಮ್ಯವಾದ ಅರ್ಥಮಾಡಿಕೊಳ್ಳುವ ಸ್ವಭಾವಕ್ಕೆ ನಡೆಸಿದ್ದರೆ, ಅವರ ಮನೆಗಳು ಉತ್ತಮ ವಾಗಿರುತ್ತಿದ್ದವು. ತಂದೆಗಳು ಒಪ್ಪಿಕೊಳ್ಳುವವರಾಗಿದ್ದು, ಕಠಿಣವಾದ ಅಧಿಕಾರದಿಂದ ವರ್ತಿಸದೇ ಮತ್ತು ಎಲ್ಲಾ ವಿಷಯಗಳಲ್ಲಿ ಪ್ರತಿಯೊಬ್ಬರ ವ್ಯಕ್ತಿತ್ವವನ್ನು ತಿಳು ಕೊಂಡರೆ ಮನೆಗಳಲ್ಲಿ ಸಾಮರಸ್ಯ ಸಾಧ್ಯ.

*ಎರಡನೇಯದಾಗಿ, ಅವನು ಅವರ ಆತ್ಮಿಕ ವಿಷಯಗಳ ಕುರಿತು ಕಳಕಳಿಯುಳ್ಳ ವನಾಗಿದ್ದನು (1:21).* ಪ್ರತಿ ವರ್ಷವೂ ಈ ಪ್ರಯಾಣವು ಖಚಿತವಾಗಿತ್ತು. ಈ ಒಬ್ಬ ತಂದೆಯು ದೇವರ ವಿಷಯದ ಕುರಿತು ತನ್ನ ಮನೆಯವರಿಗೆ ಕಳಕಳಿಯಿಂದ ತಿಳಿಸಿದ್ದನು. ಎಲ್ಕಾನನಿಗೆ ಸಂಬಂಧಿಸಿದ ಎಲ್ಲಾ ವಿಷಯಗಳಲ್ಲಿ ಆತ್ಮಿಕ ವಿಷಯವು ಪ್ರಾಧಾನ್ಯತೆ ಪಡೆದಿತ್ತು!

*ಮೂರನೇಯದಾಗಿ, ಅವನು ದೇವರ ಮೇಲೆ ಅವಲಂಭಿಸಿದನು (1:23, 28).* ಮಗು ವಾದ ಸಮುವೇಲನನ್ನು ನೋಡುವಾಗ, ದೇವರು ಅವನನ್ನು ಕಾಯುವಂತೆಯೂ, ಬೆಳೆಸುವಂತೆಯೂ ಮತ್ತು ಆಶೀರ್ವಾದವಾಗುವಂತೆಯೂ ಮಾಡಲೆಂದು ಪ್ರಾರ್ಥಿಸಿದನು (1:23). ಇವೆಲ್ಲವೂ ದೇವರ ಹಸ್ತದಲ್ಲಿದೆ ಎಂದು ಅವನು ತಿಳುಕೊಂಡಿದ್ದನು. ಆದುದರಿಂದ ದೇವರ ಮೇಲೆ ಆನಂದದಿಂದ ಆತುಕೊಂಡನು (2:11). ಎಲ್ಕಾನನಲ್ಲಿದ್ದ ಆಶೆಯೇ ಹನ್ನಳದ್ದಾಗಿತ್ತು (1:28) ಅವರ ಮಗ ಎಷ್ಟು ಕಾಲ ಬದುಕಿರುತ್ತಾನೋ ಅಲ್ಲಿಯವರೆಗೆ ದೇವರು ಅವನನ್ನು ಸಂರಕ್ಷಿಸುತ್ತಾನೆ ಎಂದು ಅವರು ದೇವರ ಮೇಲೆ ಅವಲಂಭಿತರಾದರು.

*ನಾಲ್ಕನೇಯದಾಗಿ, ಅವನು ಆಶೀರ್ವಾದವನ್ನು ಪಡೆದನು (2:20).* ಬಿತ್ತುವ ಮತ್ತು ಕೊಯ್ಯುವ ನಿಯಮ ಇಲ್ಲಿ ಅನ್ವಯಿಸುತ್ತದೆ (ಗಲಾತ್ಯ 6). ತನ್ನ ಶ್ರದ್ಧಾಭಕ್ತಿಯ ಪರಿಣಾಮ

ವಾಗಿ ಕೀರ್ತನೆ 1ರಲ್ಲಿನ ನೀತಿವಂತ ಮನುಷ್ಯನು ಹೇಗೆ ಹೆಚ್ಚನ್ನು ಪಡೆದನೋ ಹಾಗೆ ಎಲ್ಕಾನನು ತನ್ನ ಶ್ರದ್ಧಾಭಕ್ತಿಯ ಪರಿಣಾಮವಾಗಿ ಆಶೀರ್ವಾದವನ್ನು ಪಡೆದನು. ಶ್ರದ್ಧಾಭಕ್ತಿಯನ್ನು ಬಿತ್ತುವ ತಂದೆಗಳು ಅದೇ ತರವಾದ ಆಶೀರ್ವಾದವನ್ನು ಪಡೆಯುವರು.

## ಮುಕ್ತಾಯ

ಪುರುಷರೇ, ನೀವು ಯಾವ ತರದ ತಂದೆಗಳಾಗಿದ್ದೀರಿ? ನಿಮ್ಮ ಮಕ್ಕಳು ಆಯ್ಕೆ ಮಾಡಲು ಇಷ್ಟಪಡುವ ತಂದೆಗಳಾಗಿದ್ದಿರೋ? ತಂದೆಯ ಕಳಕಳಿಯ ಮನಸ್ಸನ್ನು ನಿಯಂತ್ರಿಸುವ ಒಂದು ಗುಣ ಎಲ್ಕಾನನಲ್ಲಿತ್ತು - ಶ್ರದ್ಧಾಭಕ್ತಿ. ದೇವರ ವಿಷಯದಲ್ಲಿ ಸಹಕರಿಸುವ ಮತ್ತು ಮಕ್ಕಳನ್ನು ನೀತಿಯ ಮಾರ್ಗದಲ್ಲಿ ತರಬೇತಿಗೊಳಿಸುವ ಜವಾ ಬ್ದಾರಿಕೆಯಿಂದ ಅವನು ತುಂಬಿದವನಾಗಿದ್ದನು.

ನೀವು ಒಬ್ಬ ಶ್ರದ್ಧಾಭಕ್ತಿಯುಳ್ಳ ತಂದೆಯಾಗುವಂತೆ ಎಲ್ಕಾನನ ಉದಾಹರಣೆಯನ್ನು ಉಪಯೋಗಿಸಿರಿ. ನಿಮ್ಮ ಆತ್ಮಿಕ ನಿಶ್ಚಯತ್ವವನ್ನು ಪ್ರತಿನಿತ್ಯ ಮಕ್ಕಳಿಗೆ ಪ್ರದರ್ಶಿಸಿರಿ. ದೇವರಿಗೆ ಮಾಡಿದ ವಾಗ್ದಾನಗಳನ್ನು ತಪ್ಪದೇ ಪಾಲಿಸುವ ಅವಶ್ಯಕತೆಯನ್ನು ಮಕ್ಕಳಿಗೆ ಎಚ್ಚರಿಕೆಯಿಂದ ತಿಳಿಸಿರಿ. ನಿಮ್ಮ ಕುಟುಂಬದವರನ್ನು ಯಥಾರ್ಥವಾದ ಆರಾಧನೆಯಲ್ಲಿ ಪಾಲು ತೆಗೆದುಕೊಳ್ಳುವಂತೆ ಉತ್ತೇಜಿಸಿರಿ.

2:21ರ ತರುವಾಯ ಎಲ್ಕಾನನು ಮರೆಯಾಗುತ್ತಾನೆ. ಸಮುವೇಲನು ರಾಮಕ್ಕೆ ಹಿಂತಿರುಗಿದಾಗ ಬಹುಶಃ ಅವನ ತಂದೆ ತಾಯಿಗಳು ಇನ್ನೂ ಬದುಕಿರಬಹುದು. ಹಾಗಿದ್ದರೆ, ಅವನು ಅಲ್ಲಿಯೇ ಹತ್ತಿರದಲ್ಲಿದ್ದನು. ಸಮುವೇಲನ ಮಕ್ಕಳಿಗೆ ತಮ್ಮ ಅಜ್ಜನು ಒಬ್ಬ ಶ್ರದ್ಧೆಯುಳ್ಳ ವ್ಯಕ್ತಿಯಾಗಿದ್ದನೆಂದು ತಿಳಿದು ಬರುತ್ತಿತ್ತು! ಎಂಥಾ ಪ್ರಶಂಸ ನಿಯವಾದ ಆಲೋಚನೆ! ಎಲ್ಕಾನನಂತೆ ಇರುವದಕ್ಕೆ ಮತ್ತು ಶ್ರದ್ಧೆಯುಳ್ಳ ತಂದೆಯಾಗುವದಕ್ಕೆ ಪ್ರತಿಯೊಬ್ಬ ತಂದೆಯೂ ಪ್ರಯತ್ನಿಸಲಿ!